ಹಾಫ್ ಸ್ಲೀವ್ಸ್, ಫುಲ್ ಸ್ಲೀವ್ಸ್, ಸ್ಲೀವ್ಸ್ ಲೆಸ್ ಬ್ಲೌಸ್ ಕೂಡ ಧರಿಸಬಹುದು. ಇಂದಿನ ಕಾರ್ಪೊರೇಟ್ ಯುಗದಲ್ಲಿ ಮಹಿಳೆಯರು ತಮ್ಮ ದಿನನಿತ್ಯದ ಆಫೀಸ್, ಮೀಟಿಂಗ್, ಗೆಟ್ ಟುಗೆದರ್, ಪಾರ್ಟಿಗಳು ಹಾಗೂ ಔಟಿಂಗ್ ಮತ್ತು ಶಾಪಿಂಗ್‌ಗಳಿಗೆ ಹೋಗುವಾಗಲೂ ಈ ತರಹದ ಸೀರೆಗಳನ್ನು ಧರಿಸುತ್ತಿದ್ದಾರೆ.

ಸೀರೆ ಮಾತ್ರವಲ್ಲದೆ ಎಲ್ಲ ವಯೋಮಾನದ ಹೆಣ್ಣುಮಕ್ಕಳು ಧರಿಸುವ ಕುರ್ತಿಗಳು ಕೂಡ ಪೇಪರ್ ಪ್ರಿಂಟ್ ವಿನ್ಯಾಸದಲ್ಲಿ ದೊರಕುತ್ತಿದ್ದು ಇದೂ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಈ ವಿನ್ಯಾಸದ ಶಾರ್ಟ್ ಮತ್ತು ಲಾಂಗ್ ಕುರ್ತಿಗಳನ್ನು ಲೆಗಿಂಗ್ಸ್, ಪಟಿಯಾಲಾ ಪ್ಯಾಂಟ್, ಜೀನ್ಸ್ ಪ್ಯಾಂಟ್‌ಗಳ ಮೇಲೂ ಧರಿಸಬಹುದು. ಈ ತರಹದ ಪ್ರಿಂಟ್‌ಗಳು ಬೇರೆ ಬೇರೆ ಬಣ್ಣಗಳಲ್ಲಿ ದೊರಕುತ್ತಿದ್ದು. ಯಾವುದೇ ಪ್ಯಾಂಟ್‌ಗಳ ಜೊತೆ ಮಿಕ್ಸ್ ಆ್ಯಂಡ್ ಮ್ಯಾಚ್ ಮಾಡಿ ಧರಿಸಬಹುದು.

### ಆಕರ್ಷಕ ಕ್ರಾಪ್‌ಟಾಪ್

ಇತ್ತೀಚಿನ ದಿನಗಳಲ್ಲಿ ವಸ್ತ್ರವಿನ್ಯಾಸಕರು ಯುವತಿಯರ ಮನೋಭಾವಕ್ಕೆ ತಕ್ಕಂತೆ ಪೇಪರ್ ಪ್ರಿಂಟ್ ವಿನ್ಯಾಸದ ಬಟ್ಟೆಗಳಲ್ಲಿ ಆಕರ್ಷಕ ಕ್ರಾಪ್ ಟಾಪ್‌ಗಳನ್ನೂ ತಯಾರಿಸಿದ್ದಾರೆ. ಈ ತರಹದ ಟಾಪ್‌ಗಳು ರಿಪ್ಡ್ ಜೀನ್ಸ್, ಸ್ಕರ್ಟ್, ಮಿಡಿಗಳ ಮೇಲೆ ಸಖತ್ತಾಗಿ ಕಾಣುತ್ತದೆ. ಅದರಲ್ಲೂ ಬ್ಲಾಕ್ ಆ್ಯಂಡ್ ವೈಟ್ ಪೇಪರ್ ಪ್ರಿಂಟ್ ವಿನ್ಯಾಸವಂತೂ ಅದ್ಭುತವಾಗಿ ಕಾಣುತ್ತದೆ. ಇದೇ ವಿನ್ಯಾಸದ ಜಾಕೆಟ್‌ಗಳು ಕೂಡ ಮಾರುಕಟ್ಟೆಯಲ್ಲಿವೆ. ಈ ಜಾಕೆಟ್‌ಗಳನ್ನು ಪಾಲೀನ್ ಕುರ್ತಿಗಳ ಮೇಲೆ, ಶರ್ಟ್‌ಗಳ, ಟೀ ಶರ್ಟ್‌ಗಳ ಮೇಲೆ ಧರಿಸಿದರೆ ಸ್ಟೈಲಿಷ್ ಲುಕ್ ಪಡೆಯಬಹುದು. ಫ್ಯಾಷನ್ ಎಂಬುದು ಬರೀ ಮಹಿಳೆಯರ ಸ್ವತ್ತಲ್ಲ ಎಂಬಂತೆ ಪುರುಷರೂ ಪೇಪರ್ ಪ್ರಿಂಟ್ ವಿನ್ಯಾಸದ ಶರ್ಟ್ ಹಾಗೂ ಜಾಕೆಟ್‌ಗಳನ್ನು ತೊಡುತ್ತಿದ್ದಾರೆ. ಚಿಕ್ಕಮಕ್ಕಳ ಬಟ್ಟೆಗಳಲ್ಲಿ ಕೂಡ ಇದೇ ಪ್ರಿಂಟ್‌ನ ವಿನ್ಯಾಸ ಜನಪ್ರಿಯತೆ ಪಡೆದಿದೆ. ಚಿಕ್ಕಮಕ್ಕಳು ಧರಿಸುವ ಬಟ್ಟೆಗಳನ್ನು ನೋಡುವುದೇ ಅಂದ. ಅಂಥದ್ದರಲ್ಲಿ ಈ ವಿನ್ಯಾಸದ ಬಟ್ಟೆ ಎಲ್ಲರಿಗೂ ಎಲ್ಲಿಲ್ಲದ ಪ್ರೀತಿ. ಆ ಕಾರಣದಿಂದ ಇದೇ ವಿನ್ಯಾಸದ ಪುಟ್ಟದಾದ ಫ್ರಾಕ್‌ಗಳು, ಮಿಡಿಗಳು, ಟೋಪಿಗಳು, ಜಾಕೆಟ್‌ಗಳು ಎಲ್ಲವೂ ಮಾರುಕಟ್ಟೆಯಲ್ಲಿ ಲಭ್ಯವಿವೆ.

ಪುಟ್ಟ ಪುಟ್ಟ ಹುಡುಗರ ಶರ್ಟ್‌ಗಳು ಸಹ ಇದೇ ವಿನ್ಯಾಸಗಳಲ್ಲಿ ದೊರಕುತ್ತಿವೆ. ಪೇಪರ್ ಪ್ರಿಂಟ್ ವಿನ್ಯಾಸ ಬಟ್ಟೆಗಳ ಮೇಲೆ ಮಾತ್ರವಲ್ಲ ಮಹಿಳೆಯರ ಬ್ಯಾಗ್, ಪರ್ಸ್, ಉಗುರು, ಕೊಡೆ, ಹೇರ್ ಬ್ಯಾಂಡ್, ಬಳೆಗಳ ಮೇಲೂ ಇದೀಗ ಟ್ರೆಂಡಿಯಾಗಿದೆ. ಪೇಪರ್ ಪ್ರಿಂಟ್ ನೇಲ್ ಆರ್ಟ್ ಅಂತೂ ಇದೀಗ ಪ್ರಸಿದ್ಧಿ ಪಡೆದಿದೆ. ಕಾಲೇಜು ಯುವತಿಯರು ತಾವು ಧರಿಸುವ ಇದೇ ಪ್ರಿಂಟ್ ವಿನ್ಯಾಸದ ಕ್ರಾಪ್ ಟಾಪ್ ಜೊತೆಗೆ ಇದೇ ವಿನ್ಯಾಸದ ನೇಲ್ ಆರ್ಟ್ ಕೂಡ ಮಾಡಿಸಿಕೊಳ್ಳುತ್ತಿದ್ದಾರೆ. ■

# ಎಲ್ಲ ಕಾಲಕ್ಕೂ ಸೂಕ್ತ ಡೆನಿಮ್ ಉಡುಪು

ಜೀನ್ಸ್ ಉಡುಪನ್ನೇ ಹೋಲುವ ಆದರೆ ಹೆಚ್ಚು ಪರಿಸರಸ್ನೇಹಿಯಾದ ಡೆನಿಮ್ ಉಡುಪು ಈಗ ಫ್ಯಾಷನ್ ಜಗತ್ತಿನಲ್ಲಿ ಜನಪ್ರಿಯವಾಗುತ್ತಿದೆ. ಧರಿಸಲು ಆರಾಮದಾಯಕ, ಸುಕ್ಕು ನಿಯಂತ್ರಣ ಗುಣ, ಆಕರ್ಷಕ ಲುಕ್, ವೈವಿಧ್ಯಮಯ ವಿನ್ಯಾಸಗಳಲ್ಲಿ ಡೆನಿಮ್ ಉಡುಪು ಲಭ್ಯ. ಪ್ಯಾಂಟ್, ಶರ್ಟ್, ಹಾಫ್ ಪ್ಯಾಂಟ್, ಕೋಟ್, ಜಾಕೆಟ್.. ಹೀಗೆ ಹಲವು ಬಗೆಯಲ್ಲಿ ಡೆನಿಮ್ ಇಂದು ಫ್ಯಾಷನ್ ಟ್ರೆಂಡ್ ಆಗಿ ಯುವಕ–ಯುವತಿಯರನ್ನು ಸೆಳೆಯುತ್ತಿದೆ.



ಜೀನ್ಸ್ ಉಡುಗೆ ಯುವಕ ಯುವತಿಯರ ಮೆಚ್ಚು. ಆದರೆ ಇದೀಗ ಜೀನ್ಸ್ ಉಡುಪನ್ನೂ ಮೀರಿ ಜೀನ್ಸ್ ಅನ್ನೇ ಹೋಲುವ ಡೆನಿಮ್ ಉಡುಗೆ ಫ್ಯಾಷನ್‌ಪ್ರಿಯರನ್ನು ಸೆಳೆಯುತ್ತಿದೆ. ಇದಕ್ಕೆ ಕಾರಣ ಡೆನಿಮ್ ಉಡುಗೆಯ ಬಣ್ಣ ಮಾಸದ ಗುಣ, ನೆರಿಗೆ ರಹಿತ ಸ್ವಭಾವ, ಉಡುಗೆ ತೊಡುಗೆ ಅಲ್ಲದೆ ಬ್ಯಾಗ್, ಶೂಗಳಂತಹ ಆ್ಯಸ್ಸಸರೀಸ್ ಕೂಡ ಡೆನಿಮ್‌ನಲ್ಲಿ ಲಭ್ಯ.

ಡೆನಿಮ್ ಉಡುಪು ಎಂದರೆ ಅದರ ನಿರ್ವಹಣೆ ಕಷ್ಟ ಎಂಬ ಭಾವನೆ ಅನೇಕರಲ್ಲಿದೆ. ಆದರೆ ಇದೀಗ ಫ್ಯಾಷನ್ ಟ್ರೆಂಡ್ ಆಗಿರುವ ಡೆನಿಮ್ ಸುಕ್ಕು ರಹಿತವಾಗಿದ್ದು ಎಲ್ಲ ಕಾಲಕ್ಕೂ ಸೂಕ್ತ ಎನಿಸಿದೆ. ಕಾಟನ್ ಅನ್ನು ಬಹುಪಾಲು ಕಚ್ಚಾ ಉತ್ಪನ್ನವಾಗಿ ಹೊಂದಿರುವ ಡೆನಿಮ್ ಉಡುಪು ಹಿತವಾದ ಅನುಭವವನ್ನೇ ನೀಡುತ್ತದೆ. ಹೀಗಾಗಿ ಡೆನಿಮ್ ಉಡುಗೆಗಳಿಗೆ ಈಗ ಬೇಡಿಕೆಯೂ ಹೆಚ್ಚುತ್ತಿದೆ, ಹದಿ ವಯಸ್ಸಿನ ಹುಡುಗಿಯರಿಂದ ಹಿಡಿದು ಫ್ಯಾಷನ್ ಬಯಸುವ ಅಜ್ಜಿಯವರೆಗೂ ಡೆನಿಮ್ ಉಡುಗೆ ಆರಾಮದಾಯಕ.

ಆಧುನಿಕ ಜೀವನಶೈಲಿಗೆ ಒಗ್ಗುವಂತೆ ಡೆನಿಮ್ ಉಡುಗೆ ಇದೀಗ ಮಾರುಕಟ್ಟೆಯಲ್ಲಿ ಲಭ್ಯ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಡೆನಿಮ್. ಸಿಂಥೆಟಿಕ್ ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಡೆನಿಮ್ ಮತ್ತು ರೇಷ್ಮೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ ಎಂಬುದು ಫ್ಯಾಷನ್ ತಜ್ಞರ ಅಭಿಮತ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರ ವರೆಗೆ ಯಾರು ಬೇಕಾದರೂ ಡೆನಿಮ್ ಬಟ್ಟೆ ಧರಿಸಿ ಖುಷಿಪಡಬಹುದು.

ಜೀನ್ಸ್‌ನಂತೆ ಡೆನಿಮ್ ಪ್ಯಾಂಟ್‌ಗಳು ಸ್ಕಿನ್ ಟೈಟ್ ಅಲ್ಲ. ಹೀಗಾಗಿ ಸೂಕ್ತವಾದ ಚಪ್ಪಲಿ ಅಥವಾ ಶೂ ಹಾಕಿಕೊಂಡರೆ ಸ್ಟೈಲಿಷ್ ಲುಕ್ ಪಡೆಯಬಹುದು. ಬರೀ ಕಡು ನೀಲ ಅಷ್ಟೇ ಅಲ್ಲದೆ ಕಲರ್ ಡೆನಿಮ್‌ಗಳೂ ಇತ್ತೀಚೆಗೆ ಯುವತಿಯರನ್ನು, ಫ್ಯಾಷನ್ ಪ್ರಿಯರನ್ನು ಬಹುವಾಗಿ ಸೆಳೆಯುತ್ತಿದೆ. ಇಂಥ ಕಲರ್ ಡೆನಿಮ್ ಪ್ಯಾಂಟ್‌ಗೆ ಟೀ ಶರ್ಟ್ ಕೂಡ ಅತ್ಯಂತ ಸೊಗಸಾಗಿ ಕಾಣುತ್ತದೆ.

■ ಯು.ಎ.